CALLING ATTENTION TO MATTERS OF URGET PUBLIC IMPORTANCE

(*i*) *re; Fire accident at Chikkakondaga village in Hassan District*

SRI K. H. HUNUMEGOWDA.—Mr. Speaker, Sir, I wish to call the attention of Minister for Revenue regarding the fire accident that occurred at Chikkakondaga village in Hassan District on 29th December, 1980.

SRI M. MALLIKARJUNA KHARGE (Minister for Revenue).—Sir I wish to make the following.

The Deputy Commissioner, Has an reports that an accidental fire occurred on 29th December 1980 at Chikkakondagola village of Hassan Kasaba, Hassan Taluk Hassan at about 9.00 P.M. resulting in damage to properties worth about Rs. 42,500/-. The loss is the value of paddy and ragi destroyed in the fire. The Revenue Officer have visited the place of accident on 30th December 1980.

The total number of families affected is ten. No injury or loss to human and cattle life has been reported.

The victims of the fire accident have been sanctioned cash relief at the rate of Rs. 300/- per family. The question of extending further relief to the victims as per norms fixed by the Government is under examination by the Deputy Commissioner, Hassan.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಹಾಸನ್ ಡಿಸ್ಟ್ರಿಕ್ಟ್ ಕಸಬಾ ಹಾಸನ್ ಚಿಕ್ಕಕೊಂದೇಗಾಲ ಎಂಬ ಗ್ರಾಮದಲ್ಲಿ ದಿನಾಂಕ ೨೯ನೇ ಡಿಸೆಂಬರ್ ೧೯೮೦ರಲ್ಲಿ ಆದ ಬೆಂಕಿಯ ಅನಾಹುತದಿಂದ ತೊಂದರೆಗೆ ಒಳಗಾದ ಹತ್ತು ಜನ ರೈತ ಕುಟುಂಬದವರು ಬಡಪಾಯಿ ಬಡಕುಟುಂಬದವರೇ ಆಗಿರುತ್ತಾರೆ. ಅವರು ಇಡೀ ವರ್ಷವೆಲ್ಲ ಕಷ್ಟಪಟ್ಟು ಬೆಳೆದಿದ್ದ ರಾಗಿ ಮತ್ತು ಬತ್ತದ ಬೆಳೆ ಹಾಳಾಗಿ ಹೋಗಿ ಬಹುಶಃ ಅವರು ಈವತ್ತಿನ ದಿವಸ ಊಟಕ್ಕೂ ಇಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಅವರು ಉಪವಾಸ ಇರತಕ್ಕಂಥ ಪರಿಸ್ಥಿತಿ ಬಂದಿದೆ, ಮಾನ್ಯ ಸಚಿವರು ಮುನ್ನೂರು ರೂಪಾಯಿಗಳ ಪರಿಹಾರವನ್ನು ಅವರಿಗೆ ಕೊಟ್ಟಿದ್ದೇವೆಂದು ಹೇಳಿದರು. ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಡುವ ವರೆಗೂ ಮುನ್ನೂರು ರೂಪಾಯಿಗಳನ್ನು ಕೊಟ್ಟಿಲ್ಲವೆಂದು ತಿಳಿಯಿತು. ದಯವಿಟ್ಟು ಮಾನ್ಯ ಸಚಿವರು ಯಾವತಾರೀಕಿನಂದು ಮುನ್ನೂರು ರೂಪಾಯಿಗಳನ್ನು ಕೊಟ್ಟರು ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಎರಡನೆಯಾದಾಗಿ, ಅವರು ಬೆಳೆದುಕೊಂಡ ಪೂರ್ಣ ಬೆಳೆ ತಾನು ತನ್ನ ಕುಟುಂಬವರ್ಗದವರು ತಿನ್ನಲಿಕ್ಕೂ ಇಲ್ಲದೆ ಹಾಳಾಗಿ ಹೋಗಿರುವುದಲ್ಲದೆ ದನಕರುಗಳ ಮೇವಿಗೂ ಇಲ್ಲದ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಮುನ್ನೂರು ರೂಪಾಯಿಗಳ ಪರಿಹಾರವನ್ನು ಕೊಟ್ಟರೆ ಅದು ಒಂದು ತಿಂಗಳಿಗೂ ಸಾಕಾಗುವುದಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ತಿಳಿಸುವುದೇನೆಂದರೆ ಅವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ಸರ್ಕಾರದ ವತಿಯಿಂದ ಕೊಡುವುದಕ್ಕೆ ಸಾಧ್ಯವಿರುತ್ತದೆ, ಅದನ್ನು ಮಾನ್ಯ ಸಚಿವರು ತಕ್ಷಣವೇ ಆ ಹತ್ತು ಕಟುಂಬದವರಿಗೂ ಕೊಡುವ ವ್ಯವಸ್ಥೆಯನ್ನು ಮಾಡುತ್ತಾರೆಯೇ ಏನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ನಾನು ಹೇಳಿದಹಾಗೆ ನಮ್ಮ ರೆವಿನ್ಯೂ ಅಧಿಕಾರಿಗಳು ಸ್ಥಳಕ್ಕೆ ಹೋಗಿ ನೋಡಿ ಪರಿಹಾರವನ್ನು ಕೊಟ್ಟಿದ್ದಾರೆ. ಈಗ ಏನು ಪರಿಹಾರವನ್ನು ಕೊಟ್ಟಿರುತ್ತಾರೆ ಅದಕ್ಕೆ ಇನ್ನೂ ಹೆಚ್ಚಿನ ಪರಿಹಾರವನ್ನು ಕೊಡಬೇಕಿದ್ದರೆ ಕಾನೂನು ಪ್ರಕಾರವಾಗಿ ಪರಿಶೀಲನೆ

ಮಾಡಿ ಅವರ ವ್ಯಾಪ್ತಿಯಲ್ಲಿ ಎಷ್ಟು ಪರಿಹಾರವನ್ನು ಕೊಡಲಿಕ್ಕೆ ಬರುತ್ತದೆ ಅಷ್ಟುಹಣವನ್ನು ಪ್ರಾಮಾಣಿಕ ವಾಗಿ ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಡೆಪ್ಯುಟಿ ಕಮಿಷನರ್‌ರವರು ಮೂನ್ನೂರು ರೂಪಾಯಿಗಳ ಮೇಲೆ ಪರಿಹಾರವನ್ನು ಕೊಡುವುದಕ್ಕೆ ಬರುವುದಿಲ್ಲ. ಈಗ ಕೊಟ್ಟಿರತಕ್ಕಂಥ ಪರಿಹಾರ ಅವರಿಗೆ ಏನೇನು ಸಾಲದು. ಆದ್ದರಿಂದ ಮಾನ್ಯ ಸಚಿವರು ತಕ್ಷಣವೇ ಇನ್‌ಫರ್‌ಮೇಷನ್ ತರಿಸಿಕೊಂಡು ಇನ್ನೂ ಹೆಚ್ಚಿನ ಸಹಾಯವನ್ನು ಕೊಡಲು ಸೂಕ್ತ ಏರ್ಪಾಡನ್ನು ಮಾಡಬೇಕೆಂದು ತಿಳಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪರಿಹಾರ ಕೊಡುವುದರ ಬಗ್ಗೆ ಡೆಪ್ಯುಟಿ ಕಮಿಷನರ್ ಎಕ್ಸಾಮಿನ್ ಮಾಡುತ್ತಾರೆ. ಅವರಿಂದ ವರದಿ ಬಂದ ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ಅವರ ವ್ಯಾಪ್ತಿಗೆ ಬರತಕ್ಕಂಥ ಹಣವನ್ನು ತಹಸೀಲ್‌ದಾರರ ಮೂಲಕ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ಲುಕ್ಸಾನಾಗಿದ್ದು, ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕಿದ್ದರೆ. ಡೆಪ್ಯುಟಿ ಕಮಿಷನರ್ ಮೂಲಕ ವರದಿ ಬಂದಕೂಡಲೇ ಆದಷ್ಟು ಬೇಗನೆ ಹೆಚ್ಚಿನ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನ ಮಾಡುತ್ತೇನೆ.

(ii) re.–Allotment of 400 acres of Forest land Valued at more than Rs.3 crores in Hodacharahally in Sakaleshpur Taluk

ಶ್ರೀ ಟಿ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತಾ ಹಾಸನ ಡಿಸ್ಟ್ರಿಕ್ಟ್, ಸಕಲೇಶಪುರ ತಾಲ್ಲೂಕು ಹಾನ್ಬಲ್ ಹೋಬಳಿ, ಕುಮರನಹಳ್ಳಿ ಗ್ರಾಮದಲ್ಲಿ ೩೫೯ ಎಕರೆ ೧೯ ಗುಂಟೆ ಅರಣ್ಯ ಇಲಾಖೆಯು ವಶದಲ್ಲಿರತಕ್ಕಂಥ ಜಮೀನನ್ನು ಹಿಂದಿನ ರೆಕಾರ್ಡ್‌ಗಳನ್ನು ಟ್ಯಾಂಪರ್ ಮಾಡಿ ಜಮೀನನ್ನು ಅಣ್ಣೇಗೌಡ ಎಂಬುವರ ಕುಟುಂಬದವರಿಗೆ ಈವತ್ತಿನ ದಿವಸ ಟ್ರಾನ್ಸ್‌ಫರ್ ಮಾಡುತ್ತಿರುವುದರಿಂದ ಸರ್ಕಾರಕ್ಕೆ ನಾಲ್ಕೈದು ಕೋಟಿ ರೂಪಾಯಿಗಳಷ್ಟು ಲುಕ್ಸಾನಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನಸೆಳೆಯುವ ಸೂಚನೆಯ ಬಗ್ಗೆ ಈ ಕೆಳಗಿನಂತೆ ಸ್ಟೇಟ್‌ಮೆಂಟ್ ಮಾಡಬಯಸುತ್ತೇನೆ.

An extent of 339.19 acres of lands in Sy No.88 of Kumarahally, Hanbal Hobli, originally belonged to an European Mr. brook Market. When he left for England, he appointed trustees to manage the properties situated in India. Later, these trustees appointed one Mr. E. H. Young as their power of attorney holder. He managed these lands. The land was later transferred to the name of late Annegowda the plaintiff on 'vargarajiname.' This land was resumed to Government in the year 1935–36 for non–payment of land revenue. Khata was not restored in favour of the Plaintiff. In the meantime this land was transferred to Forest Department *vide* Government Notification No.RD 32 LAQ 62 dated 6–7–1965 and possession handed over to the Forest Department on 12–6–1967.

The above entry in the 'Vargavargi' register was suspected and a criminal case was launched against the concerned. before the First Class Magistrate Court, Hassan in C.C. No.77/76–77 dated 27th November 1968 and the accused were finally acquitted of their charges as no clear and convincing evidence was produced by the Government.